Original Article
ISSN (Online): 2582-7472

ShodhKosh: Journal of Visual and Performing Arts
February 2024 5(2), 894–897

# NURONDAIAH - POET'S POEM THOUGHT

# ನೂರೊಂದಯ್ಯ - ಕವಿ ಕಾವ್ಯ ವಿಚಾರ

Kumar Belale [1], K. Chandrakath [1]

[1] Government College for Women (Autonomous), Mandya- 571401

**DOI**
10.29121/shodhkosh.v5.i2.2024.3596

**Funding:** This research received no specific grant from any funding agency in the public, commercial, or not-for-profit sectors.

**Copyright:** © 2024 The Author(s). This work is licensed under a Creative Commons Attribution 4.0 International License.

With the license CC-BY, authors retain the copyright, allowing anyone to download, reuse, re-print, modify, distribute, and/or copy their contribution. The work must be properly attributed to its author.

## ABSTRACT

Kannada literature after the twelfth century underwent socio-religious and cultural changes and became the beginning of a new era. The mature Champu literature that emerged with devotion to tradition flourished initially, and then the simple, natural, and popular national rhythm settled in the minds of the people. By using the vernacular as a literary language and expressing it with new power and emotional expression, it gave a thoughtful literature that had never been seen before in the world to global literature. The literary society of the refuges invited a radical change in society and gave the later literature a great intellectual basis as an experience of knowledge. The pride of the vachana literature is that the people's voice, which spoke for itself and for itself, raised it to the height of the divine voice. Sharanara literature, which was born with the desire to explore life, turned its gaze from the individual to the collective. It absorbed the traditional wisdom and through it, it tried to build a human religion by preaching timeless values. Since then, Kannada literature has taken on a new form and has pioneered the welfare of the people. Such a rich and innovative poetic literature has become a beacon for future literary creation.

*ಹನ್ನೆರಡನೆಯ ಶತಮಾನದ ನಂತರದ ಕನ್ನಡಸಾಹಿತ್ಯ ಸಾಮಾಜಿಕಧಾರ್ಮಿಕಹಾಗೂ ಸಾಂಸ್ಕೃತಿಕ ಸಿತ್ಯಂತರಗಳನ್ನು ಪಡೆದುಕೊಂಡು ಹೊಸ ಮನ್ವಂತರಕ್ಕೆ ನಾಂದಿಯಾಯಿತು. ಸಂಪ್ರದಾಯ ಶ್ರದ್ಧೆಯಿಂದ ಹೊರಹೊಮ್ಮಿದ ಪ್ರೌಢ ಚಂಪುಸಾಹಿತ್ಯ ಆದಿಯಲ್ಲಿ ವಿಜೃಂಭಿಸಿ, ತದನಂತರ ಜನಸಮ್ಮುಖವಾದ ಸರಳ, ಸ್ವಾಭಾವಿಕವಾದ ದೇಶ್ಯಛಂದಸ್ಸು ಜನಮನದಲ್ಲಿ ನೆಲೆಗೊಂಡಿತು. ಆಡುನುಡಿಯ್ನು ಸಾಹಿತ್ಯಿಕ ಭಾಷೆಯಾಗಿ ಬಳಸಿಕೊಂಡು ಅದಕ್ಕೆ ಹೊಸಶಕ್ತಿಆನುಭಾವಿಕ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುವ ಮೂಲಕ ಲೋಕದಲ್ಲಿ ಹಿಂದೆಂದೂ ಕಾಣದ ವಿಚಾರಶೀಲಸಾಹಿತ್ಯವನ್ನು ಜಾಗತಿಕಸಾಹಿತ್ಯಕ್ಕೆ ಕೊಟ್ಟಿದ್ದು ಕನ್ನಡಸಾಹಿತ್ಯದ ಹೆಮ್ಮೆಯೇ ಸರಿ.ಶರಣರಸಾಹಿತ್ಯಸಮಾಜದಲ್ಲಿ ಅಮೂಲಾಗ್ರ ಪರಿವರ್ತನೆಗೆ ಕಾರಣವಾಗಿ ವೈಚಾರಿಕಕ್ರಾಂತಿಗೆ ಆಹ್ವಾನ ನೀಡುವುದರ ಜೊತೆಗೆ ತದನಂತರದ ಸಾಹಿತ್ಯಕ್ಕೆ ಶ್ರೇಷ್ಠವಿಚಾರಧಾರೆಯನ್ನು ಅರಿವಿನ ಅನುಭವವನ್ನು ಬನಿಯಾಗಿ ನೀಡಿತು. ತನಗಾಗಿ ತನ್ನವರಿಗಾಗಿ ತಾನೇ ನುಡಿದ ಜನವಾಣಿ ದೈವವಾಣಿಯ ಎತ್ತರಕ್ಕೆ ಬಿತ್ತರಗೊಳಿಸಿದ್ದು ವಚನಸಾಹಿತ್ಯದ ಹೆಗ್ಗಳಿಕೆ. ಜೀವನಶೋಧನೆಯ ಆಶಯವನ್ನಿಟ್ಟುಕೊಂಡು ಒಡಮೂಡಿದ ಶರಣರಸಾಹಿತ್ಯ ತನ್ನ ದೃಷ್ಟಿಯನ್ನು ವ್ಯಷ್ಟಿಯಿಂದಸಮಷ್ಟಿಯೆಡೆಗೆ ಹರಿಸಿತು. ಪಾರಂಪರಿಕವಾದ ಮೌಢ್ಯ ಜೀವಸತ್ವಗಳನ್ನು ಅರಗಿಸಿಕೊಂಡು ಆ ಮೂಲಕ ಸಾರ್ವಕಾಲಿಕ ಮೌಲ್ಯಗಳನ್ನು ಸಾರುವುದರೊಂದಿಗೆ ಮಾನವಧರ್ಮ ನಿರ್ಮಿಸಲು ಹವಣಿಸಿತು. ಅಲ್ಲಿಂದೀಚೆಗೆ ಕನ್ನಡಸಾಹಿತ್ಯ ಹೊಸರೂಪವನ್ನು ಧಾರಣೆಮಾಡಿ ಜನಪದರ ಕಲ್ಯಾಣಕ್ಕೆ ನಾಂದಿಹಾಡಿತು. ಇಂತಹ ಹುಲುಸಾದ ವಿನೂತನ ಸತ್ವದ ವಚನಸಾಹಿತ್ಯಸೌರಭ ಮುಂದಿನ ಸಾಹಿತ್ಯ ರಚನೆಗೆ ದಾರಿದೀಪವಾಯಿತು.*

## 1. INTRODUCTION

ಹನ್ನೆರಡನೆಯ ಶತಮಾನದ ನಂತರದ ಕನ್ನಡಸಾಹಿತ್ಯ ಸಾಮಾಜಿಕಧಾರ್ಮಿಕಹಾಗೂ ಸಾಂಸ್ಕೃತಿಕ ಸಿತ್ಯಂತರಗಳನ್ನು ಪಡೆದುಕೊಂಡು ಹೊಸ ಮನ್ವಂತರಕ್ಕೆ ನಾಂದಿಯಾಯಿತು. ಸಂಪ್ರದಾಯ ಶ್ರದ್ಧೆಯಿಂದ ಹೊರಹೊಮ್ಮಿದ ಪ್ರೌಢ ಚಂಪುಸಾಹಿತ್ಯ ಆದಿಯಲ್ಲಿ ವಿಜೃಂಭಿಸಿ, ತದನಂತರ

ಜನಸಮ್ಮುಖಿವಾದ ಸರಳ, ಸ್ವಾಭಾವಿಕವಾದ ದೇಶ್ಯಛಂದಸ್ಸು ಜನಮನದಲ್ಲಿ ನೆಲೆಗೊಂಡಿತು. ಆಡುನುಡಿಯ್ನು ಸಾಹಿತ್ಯಿಕ ಭಾಷೆಯಾಗಿ ಬಳಸಿಕೊಂಡು ಅದಕ್ಕೆ ಹೊಸಶಕ್ತಿಆನುಭಾವಿಕ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುವ ಮೂಲಕ ಲೋಕದಲ್ಲಿ ಹಿಂದೆಂದೂ ಕಾಣದ ವಿಚಾರಶೀಲಸಾಹಿತ್ಯವನ್ನು ಜಾಗತಿಕಸಾಹಿತ್ಯಕ್ಕೆ ಕೊಟ್ಟಿದ್ದು ಕನ್ನಡಸಾಹಿತ್ಯದ ಹೆಮ್ಮೆಯೇ ಸರಿ.ಶರಣರಸಾಹಿತ್ಯಸಮಾಜದಲ್ಲಿ ಅಮೂಲಾಗ್ರ ಪರಿವರ್ತನೆಗೆ ಕಾರಣವಾಗಿ ವೈಚಾರಿಕಕ್ರಾಂತಿಗೆ ಆಹ್ವಾನ ನೀಡುವುದರ ಜೊತೆಗೆ ತದನಂತರದ ಸಾಹಿತ್ಯಕ್ಕೆ ಶ್ರೇಷ್ಠವಿಚಾರಧಾರೆಯನ್ನು ಅರಿವಿನ ಅನುಭವವನ್ನು ಬನಿಯಾಗಿ ನೀಡಿತು. ತನಗಾಗಿ ತನ್ನವರಿಗಾಗಿ ತಾನೇ ನುಡಿದ ಜನವಾಣಿ ದೈವವಾಣಿಯ ಎತ್ತರಕ್ಕೆ ಬಿತ್ತರಗೊಳಿಸಿದ್ದು ವಚನಸಾಹಿತ್ಯದ ಹೆಗ್ಗಳಿಕೆ. ಜೀವನಶೋಧನೆಯ ಆಶಯವನ್ನಿಟ್ಟುಕೊಂಡು ಒಡಮೂಡಿದ ಶರಣರಸಾಹಿತ್ಯ ತನ್ನ ದೃಷ್ಟಿಯನ್ನು ವ್ಯಷ್ಟಿಯಿಂದಸಮಷ್ಟಿಯೆಡೆಗೆ ಹರಿಸಿತು. ಪಾರಂಪರಿಕವಾದ ಮೌಢ್ಯ ಜೀವಸತ್ವಗಳನ್ನು ಅರಗಿಸಿಕೊಂಡು ಆ ಮೂಲಕ ಸಾರ್ವಕಾಲಿಕ ಮೌಲ್ಯಗಳನ್ನು ಸಾರುವುದರೊಂದಿಗೆ ಮಾನವಧರ್ಮ ನಿರ್ಮಿಸಲು ಹವಣಿಸಿತು. ಅಲ್ಲಿಂದೀಚೆಗೆ ಕನ್ನಡಸಾಹಿತ್ಯ ಹೊಸರೂಪವನ್ನು ಧಾರಣೆಮಾಡಿ ಜನಪದರ ಕಲ್ಯಾಣಕ್ಕೆ ನಾಂದಿಹಾಡಿತು. ಇಂತಹ ಹುಲುಸಾದ ವಿನೂತನ ಸತ್ವದ ವಚನಸಾಹಿತ್ಯಸೌರಭ ಮುಂದಿನ ಸಾಹಿತ್ಯ ರಚನೆಗೆ ದಾರಿದೀಪವಾಯಿತು.

ಬಸವಾದಿ ಶರಣರ ತರುವಾಯ ಕನ್ನಡಸಾಹಿತ್ಯ ಚರಿತ್ರೆಯ ರಚನೆಯಲ್ಲಿ ಹಲವಾರು ಮಹತ್ತರ ಬದಲಾವಣೆಗಳಾದವು. ವಸ್ತು, ವಿಷಯ, ಭಾಷೆ ಮತ್ತು ಛಂದಸ್ಸಿನ ಬಳಕೆಯಲ್ಲಿ ದೇಶ್ಯ ಮನೋಧರ್ಮ ಪ್ರಖರವಾಗಿ ಪ್ರಜ್ವಲಿಸಿತು. ಕವಿಗಳು ತಮ್ಮ ಅಂತರಂಗದ ಹದವಾದ ಮಿದುವಾದ ಭಾವನೆಗಳಿಗೆ ದೇಶಿತನದಲ್ಲಿ ಭಕ್ತಿಯ ತಂತುವಿನ ಮೂಲಕ ಸಾಹಿತ್ಯರೂಪ ನೀಡಿದರು. ಷಟ್ಪದಿ, ರಗಳೆ, ತ್ರಿಪದಿ, ಸಾಂಗತ್ಯ, ಕೀರ್ತನೆ ಇವುಗಳು ಆ ಕಾಲದ ಸಾಹಿತ್ಯ ರಚನೆಯ ಛಂದೋಮಾರ್ಗಗಳಾದವು. ತದನಂತರ ಪಾಶ್ಚಾತ್ಯರ ಆಗಮನದಿಂದಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಮೇಲೆ ಹಲವಾರು ಪ್ರೇರಣೆ ಪ್ರಭಾವಗಳಾದವು. ಆಂಗ್ಲರ ಒಡೆದು ಆಳುವ ನೀತಿಯಿಂದಾಗಿ ವಿಸ್ತಾರವಾದ ವಿಶಾಲವಾದ ಸಾಮ್ರಾಜ್ಯಗಳು ಸ್ವತಂತ್ರವಾಗಿ ಸಣ್ಣ ಸಣ್ಣ ಸಂಸ್ಥಾನಗಳಾದವು. ಹೀಗೆ ಸ್ವತಂತ್ರವಾದ ರಾಜಮನೆತನಗಳಲ್ಲಿ ಮೈಸೂರು ಸಂಸ್ಥಾನ ಬಹಳ ಪ್ರಮುಖವಾದುದು. ಸಾಂಸ್ಕೃತಿಕ ಮಹತ್ವವುಳ್ಳ ಸತ್ವಭರಿತ ಮೈಸೂರು ಸಂಸ್ಥಾನ ಕಲೆ ಮತ್ತು ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡಿದೆ. ಇಂತಹಮೈಸೂರುಸಂಸ್ಥಾನ, ದೊರೆ ರಾಜಒಡೆಯರ ಕಾಲದಲ್ಲಿದಳವಾಯಿಗಳ ಆಡಳಿತಕ್ಕೆ ಒಳಗಾಯಿತು.

ರಾಜಒಡೆಯರ ಸೋದರಳಿಯ ಕರಿಕಾಲ ಮಲ್ಲರಾಜನಿಂದದಳವಾಯಿಗಳ ಆಡಳಿತ ಪ್ರಾರಂಭವಾಯಿತು.ಈ ದಳವಾಯಿಗಳ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನದಲ್ಲಿಹಲವಾರು ಸ್ಥಿತ್ಯಂತರಗಳಾದವು. ಭಾರತದ ಇತಿಹಾಸದಲ್ಲಿ ಮೊಘಲರು, ಮರಾಠರು, ನಿಜಾಮರ ಸಂಸ್ಥಾನಗಳು ಅವನತಿಯತ್ತ ಮುಖಮಾಡಿ ತಮ್ಮ ಸಾಮ್ರಾಜ್ಯ ವಿಸ್ತರಣೆಗೆ ಹವಣಿಸುತ್ತಿದ್ದವು. ಪಾಶ್ಚಾತ್ಯರ ಹಲವಾರು ಹೋರಾಟಗಳ ನಡುವೆಯು ದೇಶೀಯರು ತಮ್ಮ ತಮ್ಮ ಸಂಸ್ಥಾನಗಳನ್ನು ಜತನಮಾಡಿಕೊಳ್ಳಲು ಹೋರಾಡುತ್ತಿದ್ದವು. ಇಂತಹ ಸಂದಿಗ್ಧತೆಯ ಹೋರಾಟದಲ್ಲಿ ಕಳಲೆಯ ದಳವಾಯಿಗಳು ಕರ್ನಾಟಕ ಇತಿಹಾಸದ ಮುಖ್ಯ ವೇದಿಕೆಗೆ ಬಂದರು.1734-1759ರವರೆಗೆ ಮೈಸೂರಿನ ಒಡೆತನ ದಳವಾಯಿಗಳ ಆಳ್ವಿಕೆಯಲ್ಲಿತ್ತು ಎಂಬುದನ್ನು ಇತಿಹಾಸಕಾರರು ಹೀಗೆದಾಖಲಿಸಿದ್ದಾರೆ-

''All real power in mysore during 1734-59 was wielded by these members of the kalale family whence the period becomes conspicious in the politics of the kingdom as the Dalvai regime''

[History of Mysore ,vol 2, Hayavadana Rao, page -69]

ಅವರುಗಳಲ್ಲಿ ಕಳಲೆಯ ದಳವಾಯಿ ವೀರರಾಜಯ್ಯನ ಮಕ್ಕಳಾದ ದೇವರಾಜಯ್ಯ ಹಾಗೂ ನಂಜರಾಜಯ್ಯ ಪ್ರಮುಖರು. ಸ್ವಯಂ ಸ್ವತಂತ್ರ ರಾಜರಂತೆ ರಾರಾಜಿಸಿದ ಇವರುಗಳು ಕೆಲಕಾಲ ಮೈಸೂರು ಒಡೆಯರನ್ನು ಮೀರಿಸುವಂತೆ ಬೆಳೆದರು. ಹಲವಾರು ಜನೋಪಯೋಗಿ ಕಾರ್ಯಗಳ ಮೂಲಕ ಜನಮಾನಸದಲ್ಲಿ ಬೆರೆತು ಸಾಂಸ್ಕೃತಿಕ ಪುರುಷರಾಗಿ ಕಂಗೊಳಿಸಿದರು. ಇವರ ಆಸ್ಥಾನ ಕವಿಗಳಲ್ಲಿ ಒಬ್ಬನಾದ 'ನೂರೊಂದಯ್ಯ'ಪ್ರತ್ಯಕ್ಷದರ್ಶಿಯಾಗಿ ಇವರಿರ್ವರ ಶೌರ್ಯ, ಪರಾಕ್ರಮ ಹಾಗೂ ಸಾಹಸಗಾಥೆಗಳನ್ನು ತನ್ನ 'ಸೌಂದರ ಕಾವ್ಯ'ಕೃತಿಯಲ್ಲಿ ಚಿತ್ರಿಸಿದ್ದಾನೆ.

ನೂರೊಂದ, ನೂರೊಂದಯ್ಯ, ನೂರೊಂಡಯ್ಯಎನ್ನುವನಾಮಾಂತರಗಳುಳ್ಳನೂರೊಂದಕವಿಯು'ಸೌಂದರಕಾವ್ಯ'ಎಂಬಕೃತಿಯನ್ನುರಚಿಸಿದ್ದಾನೆ.ಈತಮೈಸೂರುದೊರೆಇಮ್ಮಡಿಕೃಷ್ಣರಾಜನ ಕಾಲದವನು. ಕಳಲೆಯದಳವಾಯಿಗಳಾಗಿದ್ದದೇವರಾಜಮತ್ತುನಂಜರಾಜನಆಶ್ರಿತಕವಿ. ಕರ್ನಾಟಕಕವಿಚರಿತ್ರಕಾರರುನಿರ್ಣಯಿಸುವಂತೆಈತನಕಾಲಸರಿಸುಮಾರು೧೭೪೦.ಈತನಹೆಸರುವೀರಶೈವರ೧೦೧ವಿರಕ್ತರಹೆಸರಿನಪಟ್ಟಿಯನ್ನುಸೂಚಿಸುತ್ತದೆ. ಕಾವ್ಯಾರಂಭದಲ್ಲಿನಂಜುಂಡನಸ್ತುತಿ, ಅಂತ್ಯದಲ್ಲಿತೋಂಟದಸಿದ್ಧಲಿಂಗಯತಿ,

ಉಳವಿಹಾಗೂಕಲ್ಯಾಣದಪ್ರಸ್ತಾಪಗಳು೧೦೧ನೆಯವೀರಶೈವವಿರಕ್ತಇವನೇಎಂಬುದಕ್ಕೆಪುಷ್ಟಿಕೊಡುತ್ತವೆ.ಈತನವೈಯಕ್ತಿಕಸಂಗತಿಗಳಬಗ್ಗೆಯಾಗಲಿಅಥವಾಆತನಸ್ಥಳದಬಗ್ಗೆಯಾಗಲಿಕೃತಿಯಲ್ಲಿಯಾವುದೇಉಲ್ಲೇಖವಿಲ್ಲ. ಆದರೆತಾನು-

ಕಾರ್ತಿಕಶುದ್ಧದಶಮಿಶಿವಾರದಿ |ಕೂರ್ತುಸುಮೂರ್ತಶುಭದೊಳು

ಪೂರ್ತಿಯಾಯ್ತಾಶೀಜಶುದ್ಧದಶಮಿಗೆತ್ಯೆ| ಮೂರ್ತಿಗಳೊರದಿಈಕಾವ್ಯ [೧೩.೧೬೧]

ಎಂದಿದ್ದಾನೆ. ಅಂದರೆಒಂದುಸಂವತ್ಸರದೊಳಗೆಈತತನ್ನಈಕಾವ್ಯರಚಿಸಿರುವುದುವಿದಿತವಾಗುತ್ತದೆ. ವೀರಶೈವಧರ್ಮದವನಾದಈತತನ್ನಕೃತಿಯಲ್ಲಿಅಡಿಅಡಿಗೂಶ್ರೀರಂಗಪಟ್ಟಣದರಂಗನಾಥನನ್ನುಸ್ಮರಿಸಿದ್ದಾನೆ.ಕವಿತಾನುವಿದ್ಯಾವಂತನಲ್ಲಎಂಬುದನ್ನುಕೃತಿಯಲ್ಲಿಹೇಳಿಕೊಂಡಿದ್ದಾನೆ.

ಛಂದಸ್ಸುಭಾಷ್ಯಲಕ್ಷವರಿತವನಲ್ಲ | ಒಂದುಶಾಸ್ತ್ರವನೋದಲಿಲ್ಲ

ಇಂದುಶೇಖರನಂಜುಡಲಿಂಗನಕೃಪೆ | ಯಿಂದಲಿಪೇಳ್ವೆನೀಕೃತಿಯ [೧.೧೫]

ಈಪದ್ಯಸಂಚಿಹೊನ್ನಮ್ಮಳಹದಿಬದೆಯಧರ್ಮಕೃತಿಯಪದ್ಯವನ್ನುಹೋಲುವಂತಿದ್ದು, ನೂರೊಂದನವಿನಯವಂತಿಕೆಯವಿದ್ವತ್ತಿಗೆಹಿಡಿದಕನ್ನಡಿಯಂತಿದೆ.

ಕೃತಿಯಹೆಸರನ್ನುನೋಡಿದರೆಯಾವುದೋಅಲಂಕಾರವಿಚಾರದಶಾಸ್ತ್ರಗ್ರಂಥವೆಂಬಂತೆಗೋಚರಿಸುವಈಕೃತಿ, ಒಂದುಐತಿಹಾಸಿಕವೀರಕಾವ್ಯಎಂಬುದುಸೋಜಿಗದಸಂಗತಿ.ಯುದ್ಧದಸೌಂದರ್ಯವನ್ನುಪ್ರತ್ಯಕ್ಷದರ್ಶಿಯಾಗಿವೀಕ್ಷಿಸಿದಕವಿ, ಅದಕ್ಕೆಸೌಂದರಕಾವ್ಯಎಂದುಹೆಸರಿಟ್ಟಿರುವುದುಆತನಸಂಗರಪ್ರೀತಿಗೆಸಾಕ್ಷಿಭೂತವಾಗಿದೆ.ಒಂದೆಡೆಈಕೃತಿ, ನಂಜುಂಡಕವಿಯರಾಮನಾಥನಚರಿತೆಯನ್ನುಮತ್ತೊಂದೆಡೆಸಂಚಿಹೊನ್ನಮ್ಮಳಹದಿಬದೆಯಧರ್ಮಕೃತಿಯನ್ನುನೆನಪಿಸುತ್ತದೆ.ರಾಮನಾಥಚರಿತ್ರೆಯಂತೆಐತಿಹಾಸಿಕಕಥಾಹಂದರವನ್ನುವೀರಕಾವ್ಯದಂತೆಚಿತ್ರಿಸಿರುವಈಕೃತಿ, ಹೊನ್ನಮ್ಮಳಹದಿಬದೆಯಧರ್ಮದಂತೆಯುದ್ಧವನ್ನೇಒಂದುಧರ್ಮವನ್ನಾಗಿಸಿಕೊಂಡುಸುಂದರವಾಗಿಚಿತ್ರಿತಗೊಂಡಿದೆ. ವೀರಪುರಷನಿಗೆಪೌರುಷವೇಸೌಂದರ್ಯಎಂಬುದನ್ನುಕೃತಿನಿರೂಪಿಸುತ್ತದೆ. ಮೈಸೂರುಒಡೆಯರಸಂಸ್ಥಾನದಲ್ಲಿದಳವಾಯಿಗಳಾಗಿದ್ದಕಳಲೆಯದೇವರಾಜಮತ್ತುನಂಜರಾಜರೇಕೃತಿಯನಾಯಕಮಣಿಗಳು. ವೀರಪರಾಕ್ರಮಿಗಳಾದಇವರುಗಳುಮೊಗಲರಇಬ್ರಾಹಿಂಖಾನ್, ಖಾಸಿಂಖಾನ್, ಅಬ್ದುಲ್ನಬಿ, ಚಾಂದಖಾನ್, ಮೋತಿಖಾನ್, ಮಿರ್ಜಾಆಲಿ, ಸಿಖಂದ್ದರಮೂರತ್ಖಾನ್ ಮೊದಲಾದವೀರರವಿರುದ್ಧಹೋರಾಡಿಜಯಗಳಿಸಿದಕಥೆಇಲ್ಲಿದೆ. ತನ್ನರಾಜನಪರವಾಗಿಇವರುವ್ಯಕ್ತಪಡಿಸಿದಶೌರ್ಯ, ಪರಾಕ್ರಮ, ವಿಧೇಯತೆ, ಸ್ವಾಮಿನಿಷ್ಠೆ, ಪ್ರಮಾಣಿಕತೆಯಪ್ರದರ್ಶನ ಕೃತಿಯಅಡಿಅಡಿಗೂವ್ಯಕ್ತಗೊಂಡಿದೆ.ಒಂದರ್ಥದಲ್ಲಿಮೈಸೂರುಸಂಸ್ಥಾನದಚರಿತ್ರೆಯಭಾಗವಾಗಿಕಳಲೆಯಸಾಮಂತರಿಬ್ಬರವೀರತನದಚಾರಿತ್ರಿಕದಾಖಲೆಯಾಗಿಮೂಡಿಬಂದಿದೆ. ಮೈಸೂರುಹಾಗೂಕಳಲೆಯದಳವಾಯಿವಂಶಸ್ಥರವೈವಾಹಿಕಕೊಳುಕೊಡುಗೆಸಂಬಂಧ, ಬಾಂಧವ್ಯಬಿರುಕುಗಳಬಗ್ಗೆತಿಳಿಸುವಈಕೃತಿ, ಚರಿತ್ರೆಯಅಭ್ಯಾಸಿಗಳಿಗೆಹಲವಾರುಮಹತ್ವದಮಾಹಿತಿಯನ್ನುಅಗತ್ಯವಾಗಿಒದಗಿಸಿಕೊಡುತ್ತದೆ.

೧೮ನೆಯಶತಮಾನದಲ್ಲಿಜರುಗಿದಕನ್ನಡನಾಡಿನಜೀವನಸಂಗರವೇಕಾವ್ಯದವಸ್ತುವಾಗಿರುವುದುವಿಶೇಷ. ಚಾರಿತ್ರಿಕಯುದ್ಧವೇಕಾವ್ಯದವಸ್ತುವಾಗಿರುವುದರಿಂದಇದನ್ನುಒಂದುಐತಿಹಾಸಿಕಸಂಗರಕಾವ್ಯಎನ್ನಬಹುದು. ಈಹಿಂದಿನಚಂಪೂಕಾವ್ಯಗಳಿದ್ದಂತೆಆಶ್ರಿತರನ್ನುವೀರರೊಂದಿಗೆಸಮೀಕರಿಸಿಅವರನ್ನುದೈವೀಕರಿಸುವಯತ್ನಕೃತಿಯಲ್ಲಿದೆ.ನೂರೊಂದತನ್ನಆಶ್ರಿತರಾದದೇವರಾಜಮತ್ತುನಂಜರಾಜರನ್ನುಇಂದ್ರಮತ್ತುಪಾರ್ಥರಿಗೆಸಮೀಕರಿಸಿಕೃತಿರಚಿಸಿದ್ದಾನೆ. ಕೃತಿಯು೧೩ಸಂಧಿ೧೩೯೫ಸಾಂಗತ್ಯಪದ್ಯಗಳಿಂದಕೂಡಿದೆ. ಕೃತಿರಚನೆಯಲ್ಲಿಗೋವಿಂದವೈದ್ಯನ “ಕಂಠೀರವನರಸರಾಜವಿಜಯ” ಕೃತಿಯಛಾಯೆಯಿದೆಎಂದುಈಕೃತಿಯನ್ನುಸಂಪಾದಿಸಿರುವಡಾ.ವೈಸಿ. ಭಾನುಮತಿಯವರುಗುರುತಿಸಿದ್ದಾರೆ.ಐತಿಹಾಸಿಕಅಂಶಗಳಜೊತೆಗೆಕೃತಿಸಾಂಸ್ಕೃತಿಕವಿಶೇಷಣಗಳನ್ನುಅನಾವರಣಗೊಳಿಸುತ್ತದೆ.

ಕೃತಿಯಆರಂಭದಲ್ಲಿನಂಜುಂಡ, ಚಾಮುಂಡಿ, ರುದ್ರಾಣಿ, ಗಿರಿಜೆ, ಕೊಲ್ಲಾಪುರದಅಂಬಿಕೆ, ಷಣ್ಮುಖ,ವಾಣಿ, ಗಂಗೆ, ಗೋದಾವರಿ, ತುಂಗಭದ್ರೆ. ಕೃಷ್ಣೆ, ಕಾವೇರಿ, ಶ್ರೀರಂಗಧಾಮ, ಶ್ರೀಶೈಲಮಲ್ಲಿಕಾರ್ಜುನ, ಕಾಶಿವಿಶ್ವನಾಥಮೊದಲಾದವರನ್ನುಸ್ಮರಿಸಿದ್ದಾನೆ. ಪ್ರತಿಸಂಧಿಯಅಂತ್ಯದಲ್ಲಿ–

"ಹರಿಯೆನಿಮ್ಮೊರವಸಂಗರದಸೌಂದರಕಾವ್ಯ | ಬರೆದೋದಿಕೇಳಿದವರಿಗೆ

ಧರಣಿಚಂದ್ರಮರುಳ್ಳನಕಶ್ರೀಕರವಿತ್ತು | ಪೊರೆವಪಶ್ಚಿಮರಂಗಬಿಡದೆ"

ಎಂಬಪದ್ಯವಿದೆ. ಕವಿಶೈವನಾಗಿದ್ದರೂಹರಿಸ್ಮರಣೆಕೃತಿಯುದ್ದಕ್ಕೂಕಂಡುಬರುತ್ತದೆ.ಆಮೂಲಕಹರಿಹರನಸಮನ್ವತೆಕೃತಿಯಲ್ಲಿಕಾಣಸಿಗುತ್ತದೆ. ಮೈಸೂರುರಾಜ್ಯದಸುತ್ತಮುತ್ತಲಪ್ರದೇಶಗಳನ್ನುಆಳುತ್ತಿದ್ದಅನಂಗತಗಿರಿಯಚೆಲುವಯ್ಯ, ನುಗ್ಗೆಹಳ್ಳಿಯವೀರರಾಜ, ಕಡೂರುಚಿಕ್ಕಯ್ಯ, ಫಣೀಪುರದವಜೀರ, ಬೇಲೂರುಗುರಿಕಾರ, ಕಡಬದನರಸರಾಜಯ್ಯ, ಹೆಬ್ಬೂರಿನಚೆಲುರಾಜಯ್ಯ, ಮದ್ದೂರುಕೃಷ್ಣಯ್ಯ, ಅಲಂಗದನರಸಯ್ಯ, ಚಿಕ್ಕನಾಯಕನಹಳ್ಳಿಮುದ್ದುರಾಜಯ್ಯ, ಶೂಲಗಿರಿಯದೇವರಾಜಯ್ಯ, ಬಳ್ಳಾಪುರದಬೈಚೇಗೌಡ, ಬೆಳ್ಳೂರಿನಕೆಂಪರಾಜಯ್ಯ, ಹರದನಹಳ್ಳಿಕಾಂತಯ್ಯಮೊದಲಾದರವರಪರಿಚಯಮಾಡುವುದರಜೊತೆಗೆವಂಗ, ಕೊಂಗ, ಕಳಿಂಗ, ಕಾಶ್ಮೀರ, ಕುಂತಳ, ಕುಂತಿರಾಜ, ಕಾಂಭೋಜ, ಪಾಂಚಾಲ, ವೈದರ್ಭಿಮೊದಲಾದಐವತ್ತಾರುದೇಶಗಳಉಲ್ಲೇಖಕೃತಿಯಲ್ಲಿದೆ.ಇದರಿಂದಆಯಾಕಾಲದಐತಿಹಾಸಿಕ, ಭೌಗೋಳಿಕಹಾಗೂಸಾಂಸ್ಕೃತಿಕಚರಿತ್ರೆಯಅಧ್ಯಯನಕ್ಕೆಕೃತಿಪೂರಕಾಂಶಗಳನ್ನುತಿಳಿಸುವಜೊತೆಗೆಅಗತ್ಯಮಾಹಿತಿಯನ್ನುಒದಗಿಸಿಕೊಡುತ್ತದೆ.

ಅರಮನೆಯಒಳಗಿನವಿದ್ಯಮಾನಗಳು, ಮಂತ್ರಿಗಳನಿಪುಣತೆ,ಸಂಧಿವಿಗ್ರಹಿಗಳತಂತ್ರಗಾರಿಕೆ, ಸೇನಾಧಿಪತಿಗಳರಣೋತ್ಸಾಹ, ವೀರರಪರಾಕ್ರಮತೆ, ರಾಜನೀತಿಯನಿರ್ಣಯಗಳು, ಆಸ್ಥಾನದವರ್ಣನೆ, ಪಗಡೆಯಾಟ, ಅಂತಃಪುರದವಿಚಾರಗಳುವಿವಿಧಸಾಮಾಜಿಕಪರಿಕರಗಳಪರಿಸರವನ್ನುಕವಿಕೃತಿಯಲ್ಲಿಎಳೆಎಳೆಯಾಗಿಬಿಚ್ಚಿಟ್ಟಿದ್ದಾನೆ. ಸೈನ್ಯಗಳುಯುದ್ಧದಲ್ಲಿಬಳಸುತ್ತಿದ್ದಇಡಿಗಲ್ಲು, ಕವಣೆ, ಒಡ್ಡಗಲ್ಲು, ರಾಸಿಗಲ್ಲು, ಪೆಟಲು, ಹುರಿದಮರಳುರಾಶಿ, ಹರಿಗೆ, ಕತ್ತಿ, ಕಠಾರಿ, ಕೈಚೂರಿ, ಬೈಸಿಕೆ, ಭರ್ಜಿ, ಸರಗೋವಿ, ಭಾಂಡೆ, ಫಿರಂಗಿಬಂಡಿಮೊದಲಾದವಿವಿಧಯುದ್ಧಪರಿಕರಗಳಬಳಕೆಯನ್ನುಕವಿಕೃತಿಯಲ್ಲಿಉಲ್ಲೇಖಿಸಿದ್ದಾನೆ. ನವರಾತ್ರಿಯಸಮಯದಲ್ಲಿಜರುಗುತ್ತಿದ್ದಮಲ್ಲಗಾಸೆ, ವೀರಗಾಸೆ, ಹನುಮಗಾಸೆ, ವಜ್ರಮುಷ್ಟಿಕಾಳಗ, ಮಲ್ಲರಜಟ್ಟಿಕಾಳಗನಾನಾರೀತಿಯಮೆರವಣಿಗೆಗಳು, ವಿವಿಧಆಚರಣೆಗಳು, ಸಾಂಪ್ರಾದಾಯಿಕಪೂಜೆಪುನಸ್ಕಾರಗಳುವಿವಿಧಸಾಂಸ್ಕೃತಿಕಅಂಶಗಳನ್ನುಕೃತಿತೆರೆದಿಡುತ್ತದೆ.

ಮಂಡ್ಯದಕೈಲಂಚದಬಳಿದೇವರಾಜಮತ್ತುನಂಜರಾಜರುಶತ್ರುಗಳಾದಮೊಗಲರವಿರುದ್ಧಹೋರಾಡಿಜಯಗಳಿಸಿದವೀರಗಾಥೆಕೃತಿಯಹಂದರವಾಗಿದೆ. ಯುದ್ಧವರ್ಣನೆಗೆದೇಶಿರೂಪವಾದಸಾಂಗತ್ಯಛಂದಸ್ಸನ್ನುಬಳಕೆಮಾಡಿಕೊಂಡುಸಹಜನಿರೂಪಣೆಯಜನಪದಕಾವ್ಯವನ್ನಾಗಿಸಿರುವುದುನೂರೊಂದಯ್ಯನಹೆಗ್ಗಳಿಕೆ. ಮೊದಲೇಆತನೇಹೇಳಿರುವಂತೆತಾನುಛಂದಸ್ಸುಭಾಷಾಶಾಸ್ತ್ರಬಲ್ಲವನಲ್ಲನೆಂಬಂತೆಛಂದಸ್ಸುಪ್ರಾಸನಿಯಮಕಟ್ಟುನಿಟ್ಟಾಗಿಪಾಲನೆಯಾಗಿಲ್ಲ. ಆದರೆತನ್ನಮುಂದೆನಡೆದಘಟನಾವಳಿಗಳನ್ನುನಿರೂಪಿಸಲೇಬೇಕೆಂಬತುಡಿತನೂರೊಂದಯ್ಯನಪ್ರತಿಪದ್ಯದಲ್ಲಿಯೂಕಾಣಸಿಗುತ್ತದೆ. ಈಹಿಂದೆಚರಿತ್ರಾಕಾರರುದಳವಾಯಿಗಳುಹಾಗೂಕೆಲಸಾಮಂತರುಸರ್ವಾಧಿಕಾರಿಗಳುಸ್ವಾರ್ಥಿಗಳುಎಂದುಚಿತ್ರಿಸಿದ್ದಾರೆ. ಅದಕ್ಕೆಅಪವಾದವೆಂಬಂತೆನೂರೊಂದಯ್ಯಇಲ್ಲಿಆಶ್ರಿತರಾದಕಳಲೆಯದಳವಾಯಿಗಳನ್ನುಸ್ವಾಮಿವಿಧೇಯಕರಾಗಿ, ಅವರಸಮಾಜಮುಖಿಜನಪಯೋಗಿಕಾರ್ಯದಮೂಲಕಸಾಂಸ್ಕೃತಿಕಪುರುಷರನ್ನಾಗಿಕಂಡರಿಸಿನಿರೂಪಿಸಿರುವುದುವಿಶೇಷವೆನಿಸುತ್ತದೆ. ಒಟ್ಟಿನಲ್ಲಿನೂರೊಂದಯ್ಯನ "ಸೌಂದರಕಾವ್ಯ" ಕೃತಿಯುಚರಿತ್ರೆಯವಾಸ್ತವದಹೂರಣವನ್ನುತನ್ನಒಡಲಿನಲ್ಲಿಅಡಗಿಸಿಕೊಂಡುಕಲಾತ್ಮಕತೆಹಾಗೂಕವಿಯಸ್ವೋಪಜ್ಞತೆಯಿಂದಸಾಹಿತ್ಯರೂಪಪಡೆದುಒಂದುಸುಂದರಕಲಾಕೃತಿಯಾಗಿರೂಪುತಳೆದಿದೆಎನ್ನುವುದುನಿಸ್ಸಂದೇಹದಸಂಗತಿ. ಮೈಸೂರಿನಚರಿತ್ರೆಯಅಧ್ಯಯನಮಾಡುವವರಿಗೆಈಕೃತಿಒಂದರ್ಥದಲ್ಲಿಆಕರಗ್ರಂಥಎನಿಸಿದೆಎಂದರೆತಪ್ಪಾಗುವುದಿಲ್ಲ..